ಓ.ಎಸ್: **114/2023**

ಪಿ.ಡಬ್ಲ್ಯೂ : 01

<u>ಸಾಕ್ಷಿಗೆ ದಿನಾಂಕ **13.07.2026** ರಂದು ಪ್ರಮಾಣ ವಚನ ನೀಡಲಾಯಿತು.</u>

ನಾನು ಈ ದಾವೆಯಲ್ಲಿ ವಾದಿಯಾಗಿದ್ದು ನಾನು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿರುತ್ತೇನೆ. ಪ್ರಮಾಣ ಪತ್ರದಲ್ಲಿ ಹೇಳಲಾದ ಎಲ್ಲಾ ವಿಷಯಗಳನ್ನು ವಕೀಲರ ಮೂಲಕ ಹೇಳಿ ಬರೆಸಿರುತ್ತೇನೆ. ಅದರಲ್ಲಿರುವ ವಿಷಯಗಳು ಸತ್ಯವಾಗಿರುತ್ತವೆ. ಪ್ರಮಾಣ ಪತ್ರದಲ್ಲಿ ಇರುವ ಸಹಿ ನನ್ನ ಸಹಿ ಆಗಿರುತ್ತದೆ.

<u>ಮುಖ್ಯ ವಿಚಾರಣೆ: ವಾದಿ ಪರ ವಕೀಲರಿಂದ</u>

ರೋಹನ್ ಎಸ್ ರವರ ಜನನ ಪ್ರಮಾಣ ಪತ್ರವನ್ನು ಹಾಜರುಪಡಿಸಿದ್ದು ನಿಪಿ 1 ಎಂದು, ಶಾಲಾ ವ್ಯಾಸಂಗ ದೃಡೀಕರಣದ ಎರಡು ಪ್ರಮಾಣ ಪತ್ರಗಳನ್ನು ಹಾಜರುಪಡಿಸಿದ್ದು ನಿಪಿ 2 ಮತ್ತು 3 ಎಂದು, ಮದುವೆ ಪ್ರಮಾಣ ಪತ್ರದ (ಮೂಲ ದಾಖಲೆಯೊಂದಿಗೆ ತಾಳೆ ನೋಡಲಾಯಿತು) ದೃಡೀಕೃತ ನಕಲನ್ನು ಹಾಜರುಪಡಿಸಿದ್ದು ನಿಪಿ 4 ಎಂದು, ದತ್ತು ಪ್ರಮಾಣ ಪತ್ರ (ಮೂಲ ದಾಖಲೆಯೊಂದಿಗೆ ತಾಳೆ ನೋಡಲಾಯಿತು) ವನ್ನು ಹಾಜರುಪಡಿಸಿದ್ದು ನಿಪಿ 5 ಎಂದು, ರೋಹನ್ ರವರ ಆಧಾರ್ ಕಾರ್ಡ್ (ಮೂಲ ದಾಖಲೆಯೊಂದಿಗೆ ತಾಳೆ ನೋಡಲಾಯಿತು) ನ್ನು ಹಾಜುಪಡಿಸಿದ್ದು ನಿಪಿ 6 ಎಂದು, ರೋಹನ್ ರವರ ತಂದೆಯ ಆಧಾರ್ ಕಾರ್ಡ್ (ಮೂಲ ದಾಖಲೆಯೊಂದಿಗೆ ತಾಳೆ ನೋಡಲಾಯಿತು) ನ್ನು ಹಾಜುಪಡಿಸಿದ್ದು ನಿಪಿ 7 ಎಂದು, ದಿ.28.06.2026 ರ ವಕೀಲರ ನೋಟೀಸನ್ನು ಹಾಜರುಪಡಿಸಿದ್ದು ನಿಪಿ 8 ಎಂದು, 6 ಅಂಚೆ ರಶೀದಿಗಳನ್ನು ಹಾಜರುಪಡಿಸಿದ್ದು

ಅವುಗಳನ್ನು ನಿಪಿ 9 ರಿಂದ 14 ಎಂದು, 5 ಅಂಚೆ ಸ್ವೀಕೃತಿಗಳನ್ನು ಹಾಜರುಪಡಿಸಿದ್ದು ಅವುಗಳನ್ನು ನಿಪಿ 15 ರಿಂದ 19 ಎಂದು ಗುರುತಿಸಲಾಯಿತು.

ಪ್ರತಿವಾದಿಪರ ವಕೀಲರು ಹಾಜರಿದ್ದು ಪ್ರತಿವಾದ ಪತ್ರ ಸಲ್ಲಿಸದ ಕಾರಣ ಪಾಟೀಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಸಾ.ಓ.ಹೇ.ಸ.ಒ

**(ಪ್ರತೀಕ್ಷಾ ಪವಾಸ್ಕರ್)**
ಅಪರ ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ
ಶ್ರೀರಂಗಪಟ್ಟಣ